**ಕರ್ನಾಟಕ ಸರ್ಕಾರ**

ಸಂ: ಸಿಆಸುಇ(ಆಸು) 48 ಕತವ 2024

ಕರ್ನಾಟಕ ಸರ್ಕಾರ ಸಚಿವಾಲಯ
6ನೇ ಮಹಡಿ, ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:02/03/2024
**RPAD**

ಇಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ)
ಬೆಂಗಳೂರು-560001

ಇವರಿಗೆ,
ಶ್ರೀ ಉಮೇಶ.ಬಿ
ಪದವೀಧರ ಪ್ರಾಥಮಿಕ ಶಿಕ್ಷಕ 6-8,
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,
ಕೊಳತೂರು, ಟಿ.ನರಸೀಪುರ ತಾಲ್ಲೂಕು.
ಮೈಸೂರು ಜಿಲ್ಲೆ.

ಮಾನ್ಯರೆ,

ವಿಷಯ: ಕರ್ನಾಟಕ ರಾಜ್ಯ ಸರ್ಕಾರಿ ಶಾಲೆಗಳ ವಿಶೇಷ ಚೇತನ (ಅಂಗವಿಕಲ) ಶಿಕ್ಷಕರಿಗೆ ಮಿದು ಸಮಯ (ಫ್ಲೆಕ್ಸಿ) ಅನ್ವಯವಾಗುವ ಬಗ್ಗೆ.
ಉಲ್ಲೇಖ: ತಮ್ಮ ಮನವಿ ದಿನಾಂಕ:29/01/2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಮ್ಮ ಮನವಿ ಕಡೆಗೆ ಗಮನ ಸೆಳೆಯಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 04 ಕತವ 2019, ದಿನಾಂಕ: 08/02/2019ರಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ವಿವಿಧ ವೃಂದ ಮತ್ತು ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ದಿನಾಂಕ: 01/02/2019 ರಿಂದ ಜಾರಿಗೆ ಬರುವಂತೆ ಅವರುಗಳು ಭೋಜನ ಸಮಯದಲ್ಲಿ ಮತ್ತು ಕಛೇರಿಯ ವೇಳೆಯ ನಂತರವೂ ಕರ್ತವ್ಯ ನಿರ್ವಹಿಸುವ ಷರತ್ತಿಗೊಳಪಟ್ಟು ನಿಗದಿತ ಕಛೇರಿ ವೇಳೆಗಿಂತ ಒಂದು ಗಂಟೆ ತಡವಾಗಿ ಕಛೇರಿ ಕರ್ತವ್ಯಕ್ಕೆ ಹಾಜರಾಗಲು ಮಿದು ಸಮಯವನ್ನು (Flexi) ಜಾರಿಗೆ ತರಲಾಗಿದ್ದು, ಸದರಿ ಆದೇಶದಲ್ಲಿನ ನಿರ್ದೇಶನವು ಸರ್ಕಾರಿ ಶಾಲಾ ಶಿಕ್ಷಕರಿಗೂ ಸಹ ಅನ್ವಯವಾಗುತ್ತದೆ ಎಂದು ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

02/03/2024

(ವಿಮಲಾಕ್ಷಿ.ಬಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಸು-ತಪಾಸಣೆ)

Scanned with CamScanner